ಖಾಸಗಿಯವರಿಗೆ ವಹಿಸಲು ಉದ್ದೇಶಿಸಿದಯೇ? ಇದುವರೆಗೆ ಇದರ ಬಗ್ಗೆ ತೆಗೆದುಕೊಂಡಿರುವ ಕ್ರಮಗಳೇನು?

ಶ್ರೀ ಜೆ.ಹೆಚ್. ಪಟೇಲ್ (ಉಪ ಮುಖ್ಯಮಂತ್ರಿಗಳು) :

ಅ) ಕುವೈತ್ ದೇಶದ ಕುವೈತ್ ಫಂಡ್ ಫಾರ್ ಅರಬ್ ಎಕನಾಮಿಕ್ ಡೆವೆಲೇಪ್‌ಮೆಂಟ್ ಸಂಸ್ಥೆಯವರು ಕದ್ರಾ ಅಣೆಕಟ್ಟಿನ ಸಿವಿಲ್ ಕಾಮಗಾರಿಗಳ ಸಲುವಾಗಿ ನೆರವನ್ನು ನೀಡಲು 1986ರಲ್ಲಿ ಒಪ್ಪಿರುತ್ತಾರೆ.

ಆ) ಕಾಳಿನದಿ 2ನೇ ಹಂತದ ಕದ್ರಾ ಅಣೆಕಟ್ಟಿನ ಸಿವಿಲ್ ಕಾಮಗಾರಿಗಳಿಲಾಗಿ 7ಮಿಲಿಯನ್ ಕುವೈತ್ ದಿನಾರದ ಆರ್ಥಿಕ ನೆರವನ್ನು ಸಾಲ ರೂಪದಲ್ಲಿ ಕೊಟ್ಟಿರುತ್ತಾರೆ. ಈ ಆರ್ಥಿಕ ನೆರವು 1987-88ರಲ್ಲಿ ಶುರುವಾಗಿರುತ್ತದೆ.

ಇ) ಈ ಆರ್ಥಿಕ ನೆರವಿನಲ್ಲಿ ಇಲ್ಲಿಯವರೆಗೆ, 3.10 ಮಿಲಿಯನ್ ಕುವೈತ್ ದಿನಾರ (ಅಂದರೆ 28.21 ಕೋಟಿ ರೂ.ಗಳು) ದಷ್ಟು ನೆರವು ಕರ್ನಾಟಕ ವಿದ್ಯುತ್ ನಿಗಮಕ್ಕೆ ಸಾಲದ ರೂಪದಲ್ಲಿ 1988-89ರಿಂದ ಜನವರಿ 1996ರ ವರೆಗೆ ಕೊಟ್ಟಿರುತ್ತಾರೆ.

ಈ) ಇಲ್ಲ

ತಡಸ - ಕುಮಟಾ ರಸ್ತೆ ಅಗಲಗೊಳಿಸುವುದು

214 - ಶ್ರೀ ವಿಶ್ವೇಶ್ವರ ಹೆಗಡೆ (ಅಂಕೋಲ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ತಡಸ - ಕುಮಟಾ ರಸ್ತೆ ಅಗಲಗೊಳಿಸುವ ಕೆಲಸ ಯಾವಾಗ ಪ್ರಾರಂಭವಾಗುವುದು;

ಆ) ಸಿರ್ಸಿ - ವಟ್ಟ - ಕಾರವಾರ ರಸ್ತೆಗೆ ಈ ವರ್ಷ ಸರ್ಕಾರದಿಂದ ಅನುದಾನ ಬಿಡುಗಡೆಯಾಗುವುದೇ?

ಇ) ಖಾನಾಪುರ - ತಾಳಗುಪ್ಪಾ ರಸ್ತೆ ಅಗಲಗೊಳಿಸುವ ಕೆಲಸ ಯಾವಾಗ ಪ್ರಾರಂಭವಾಗುವುದು?

ಶ್ರೀ ಶಿವಾನಂದ ಹೆಚ್. ಕೌಜಲಗಿ (ಲೋಕೋಪಯೋಗಿ ಸಚಿವರು) :

ಅ) ತಡಸ - ಕುಮಟಾ ರಸ್ತೆಯ 12.80 ಕಿ.ಮೀ. ಭಾಗವನ್ನು ಅಗಲಗೊಳಿಸುವ ಕೆಲಸವು ಪ್ರಗತಿಯಲ್ಲಿದೆ.

ಆ) 1995-96ನೇ ಸಾಲಿನಲ್ಲಿ ಈ ರಸ್ತೆಯ ಅಭಿವೃದ್ಧಿಗೆ ರೂ. 2.70 ಲಕ್ಷ ಅನುದಾನ ಒದಗಿಸಲಾಗಿದೆ.

ಇ) ಖಾನಾಪುರ - ತಾಳಗುಪ್ಪ ರಸ್ತೆಯ ಒಟ್ಟು 32 ಕಿಮೀ. ಉದ್ದದ ಭಾಗ ಅಗಲಗೊಳಿಸುವ ಕೆಲಸ ಪ್ರಗತಿಯಲ್ಲಿದೆ.

ಅಂಕೋಲ ಕ್ಷೇತ್ರದ ಪ್ರವಾಸಿ ತಾಣ ಕುರಿತು

215 - ಶ್ರೀ ವಿಶ್ವೇಶ್ವರ ಹೆಗಡೆ (ಅಕೋಲ) : ಮಾನ್ಯ ಉಪಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಅಂಕೋಲ ಕ್ಷೇತ್ರದ ಸಿರ್ಸಿ-ಯಲ್ಲಾಪುರ ಅಂಕೋಲ ತಾಲ್ಲೂಕಿನಲ್ಲಿರುವ ಪ್ರವಾಸಿ ತಾಣಗಳೆಷ್ಟು? ಅಧಕ್ಕೆ ಸರ್ಕಾರ ಕಳೆದ ಮೂರು ವರ್ಷದ ಅವಧಿಗೆ ನೀಡಿದ ಅನುದಾನ ಎಷ್ಟು? (ವರ್ಷವಾರು ವಿವರ ನೀಡುವುದು)

ಆ) ಪ್ರವಾಸಿ ತಾಣಕ್ಕೆ ಈ ವರ್ಷ ವಿಶೇಷ ಅನುದಾನ ನೀಡುವ ಉದ್ದೇಶವಿದೆಯೇ?

ಶ್ರೀ ಹೆಚ್.ಕೆ. ಪಾಟೀಲ್ (ಉಪ ಮುಖ್ಯಮಂತ್ರಿಗಳು) :